ದಿನಾಂಕಃ **25.02.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

<u>ಪಾಟೀ ಸವಾಲುಃ **3** ಮತ್ತು **4** ನೇ ಪ್ರತಿವಾದಿಗಳು ಪರ ಶ್ರೀ ಎಸ್.ಆರ್.ಎ. ವಕೀಲರಿಂದಃ</u>

ನಾನು ವಿಧ್ಯಾಭ್ಯಾಸ ಮಾಡಿರುವುದಿಲ್ಲ. ನನಗೆ 70 ವರ್ಷ ಮೇಲ್ಪಟ್ಟು ವಯಸ್ಸು ಆಗಿರುತ್ತದೆ. 1975 ರ ಪೂರ್ವದಲ್ಲಿ ನಮ್ಮ ಕುಟುಂಬಕ್ಕೆ ಸುಮಾರು 5-6 ಎಕರೆ ಜಮೀನು ಇತ್ತು ಆದರೆ ಅದರ ಸರ್ವೆ ನಂಬರ್ ವಿಸ್ತೀರ್ಣ ಹೇಳಲು ಆಗುವುದಿಲ್ಲ. ನಿಮ್ಮ ತಂದೆಗೆ ನಿಮ್ಮ ತಾತನಿಂದ ಎಷ್ಟು ಆಸ್ತಿಗಳು ಬಂದಿರುತ್ತವೆ ಮತ್ತು ನಿಮ್ಮ ತಂದೆ ಎಷ್ಟು ಆಸ್ತಿ ಖರೀದಿ ಮಾಡಿರುತ್ತಾರೆ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು ಮೊದಲು 3 ಎಕರೆ ಇತ್ತು ಈಗ 6 ಎಕರೆ ಇರುತ್ತದೆ ಎಂದು ಉತ್ತರಿಸುತ್ತಾರೆ. ಒಟ್ಟು ಎಷ್ಟು ಆಸ್ತಿಗೆ ಸಂಬಂಧಿಸಿದಂತೆ ಈ ದಾವೆಯನ್ನು ಹೂಡಿರುತ್ತೀರಿ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ 3 ಎಕರೆಗೆ ಎಂದು ಉತ್ತರಿಸುತ್ತಾರೆ. ಸದರಿ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿರುವುದಿಲ್ಲ. ಸದರಿ ಜಮೀನು ನನ್ನ ತಂದೆ ಖರೀದಿ ಮಾಡಿರುತ್ತಾರೆ.

2. ಎಲ್ಲಾ ದಾವಾ ಸ್ವತ್ತುಗಳಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ನ್ಯಾಯಲಯಕ್ಕೆ ಹಾಜರುಪಡಿಸಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿಯು 3 ಎಕರೆಗೆ ಮಾತ್ರ ನೀಡಿರುತ್ತೇನೆ ಎಂದು ಉತ್ತರಿಸುತ್ತಾರೆ. ನನ್ನ ತಂದೆಯ ಹೆಸರು ತಿಪ್ಪಜ್ಜ. ದಾವಾ 3 ನೇ ಸ್ವತ್ತನ್ನು ನನ್ನ ತಂದೆ 1991 ರಲ್ಲಿ ದೊಡ್ಡಲಿಂಗಪ್ಪ ಮತ್ತು ಅವರ ಅಣ್ಣ ತಮ್ಮಂದಿರಿಗೆ ಮಾರಾಟ ಮಾಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ದಾವಾ 3 ನೇ ಸ್ವತ್ತನ್ನು ಖರೀದಿ ಮಾಡಿದ ಎಲ್ಲಾ ಖರೀದಿದಾರರನ್ನು ಈ ದಾವೆಯಲ್ಲಿ ಪಕ್ಷಕಾರರನ್ನಾಗಿ ಮಾಡಿಲ್ಲ ಎಂದರೆ ಸರಿ. ನನ್ನ ತಂದೆ ಜೀವಿತ ಕಾಲದಲ್ಲಿ 3-4 ಎಕರೆ ಖರೀದಿ ಮಾಡಿ 1 ಎಕರೆ ಜಮೀನನ್ನು ಮಾರಾಟ

ಮಾಡಿರುತ್ತಾರೆ. ನಿಮ್ಮ ತಂದೆ ಮಾರಾಟ ಮಾಡಿರುವ ಎಲ್ಲಾ ಆಸ್ತಿಗಳಿಗೆ ಸಂಬಂಧಿಸಿದಂತೆ ದಾವೆಯನ್ನು ಹೂಡಿರುತ್ತೀರ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ 1 ಕ್ಕೆ ಮಾತ್ರ ದಾವಾ ಹುಡಿರುತ್ತೇನೆ ಎಂದು ಉತ್ತರಿಸುತ್ತಾರೆ.

3. ನನ್ನ ತಂದೆಗೆ ಒಬ್ಬ ತಮ್ಮ ಇದ್ದರು. ನನ್ನ ತಂದೆ ಮತ್ತು ಚಿಕ್ಕಪ್ಪ ಪಿತ್ರಾರ್ಜಿತ ಆಸ್ತಿಗಳನ್ನು ವಿಭಾಗ ಮಾಡಿಕೊಂಡಿರುವುದಕ್ಕೆ ದಾಖಲೆ ಇರುವುದಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ನನ್ನ ಚಿಕ್ಕಪ್ಪ ವಿಭಾಗ ಮಾಡಿಕೊಳ್ಳದೆ ಇದ್ದ ಕಾರಣ ನಮ್ಮ ಕುಟುಂಬಕ್ಕೆ ಯಾವುದೇ ಪಿತ್ರಾರ್ಜಿತ ಆಸ್ತಿಗಳು ಇರಲಿಲ್ಲ ಎಂದರೆ ಸರಿ. 1991 ರಿಂದ 3 ಮತ್ತು 4 ನೇ ಪ್ರತಿವಾದಿಗಳು ದಾವಾ 3 ನೇ ಸ್ವತ್ತಿನ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ಸರಿ. 1991 ರ ಕ್ರಯ ಪತ್ರದ ಆಧಾರದ ಮೇರೆಗೆ ಖಾತೆ ವರ್ಗಾವಣೆ ಮಾಡಲು ಅರ್ಜಿ ಸಲ್ಲಿಸಿದಾಗ ನನ್ನ ಅಣ್ಣ ತಮ್ಮಂದಿರು ತಕರಾರು ಸಲ್ಲಿಸಿರುತ್ತಾರೆ ಎಂದರೆ ಸರಿ.

4. 1975 ರಲ್ಲಿ ನನ್ನ ತಂದೆ ಹಲವಾರು ಆಸ್ತಿಗಳನ್ನು ಖರೀದಿಮಾಡಲು ಮಾಡಿದಂತಹ ಸಾಲವನ್ನು ಮರುಪಾವತಿಸುವ ಉದ್ದೇಶ ದಿಂದ 1991 ರಲ್ಲಿ ದಾವಾ 3 ನೇ ಸ್ವತ್ತುನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಗಂಡು ಮತ್ತು ಇಬ್ಬರು ಹೆಣ್ಣು ಮಕ್ಕಳು ಇರುತ್ತೇವೆ. ನನ್ನ ತಂದೆ ಮಕ್ಕಳ ಮದುವೆಗಾಗಿ ಹಣದ ಅವಶ್ಯಕತೆ ಇದ್ದಾಗ ಜಮೀನನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ನನ್ನ ಅಣ್ಣ ತಮ್ಮಂದಿರು ದಾವಾ ಸ್ವತ್ತುಗಳಿಗೆ ಮತ್ತು ಕುಟುಂಬದ ಇತರೆ ಆಸ್ತಿಗಳಿಗೆ 2024 ರಲ್ಲಿ ನೊಂದಾಯಿತ ವಿಭಾಗ ಪತ್ರ ಮಾಡಿಕೊಂಡಿರುತ್ತಾರೆ ಎಂದರೆ ಸರಿ. ಸದರಿ ನೊಂದಾಯಿತ ವಿಭಾಗ ಪತ್ರ ಕ್ಕೆ ನಾನು ಸಹ ಸಹಿ ಮಾಡಿರುತ್ತೇನೆ ಎಂದರೆ ಸರಿ . ಸದರಿ ವಿಭಾಗ ಪತ್ರದಲ್ಲಿ ದಾವಾ3 ನೇ ಸ್ವತ್ತು ಸಹ ಇರುತ್ತದೆ.

5. ದಾವಾ 3 ನೇ ಸ್ವತ್ತು ನನ್ನ ತಂದೆ ಖರೀದಿ ಮಾಡಿರುವುದರಿಂದ ಅದನ್ನು ಮಾರಾಟ ಮಾಡಲು ಅವರಿಗೆ ಹಕ್ಕು ಇರುತ್ತದೆ ಎಂದರೆ ಸರಿ. ದಾವಾ 3 ನೇ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ 1 ಮತ್ತು 2 ನೇ ಪ್ರತಿವಾದಿಗಳೊಂದಿಗೆ ಶಾಮಿಲ್ ಆಗಿ ಸುಳ್ಳು ದಾವೆಯನ್ನು ಹೂಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುದು ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ